

## ‘ಕರಾಳರಾತ್ರಿ’ಯಲ್ಲಿ ಮಿತ್ರಮಂಡಲಿ

ಕನ್ನಡ ಕಿರುತೆರೆಯ ಪ್ರಸಿದ್ಧ ರಿಯಾಲಿಟಿ ಷೋ ‘ಬಿಗ್ ಬಾಸ್’ನ 5ನೇ ಆವೃತ್ತಿಯಲ್ಲಿ ಒಟ್ಟಾಗಿ ಸೇರಿದ್ದ ದಯಾಳ್ ಪದ್ಮನಾಭನ್, ಜಯರಾಂ ಕಾರ್ತಿಕ್, ಅನುಪಮಾ ಹಾಗೂ ಜಯಶ್ರೀನಿವಾಸನ್ ಮತ್ತೆ ಒಟ್ಟಾಗಿ ಸೇರಿದ್ದಾರೆ. ಈ ಬಾರಿ ಮಿತ್ರಮಂಡಲಿ ಒಟ್ಟಾಗಿರುವುದು ಕಿರುತೆರೆ ವೇದಿಕೆಯಲ್ಲಲ್ಲ, ಬೆಳ್ಳಿತೆರೆಯ ಪ್ರಭಾವಳಿಯಲ್ಲಿ.

ಸಸ್ಪೆನ್ಸ್ ಥ್ರಿಲ್ಲರ್ ಕಥೆಯನ್ನು ಹೊಂದಿರುವ ‘ಕರಾಳ ರಾತ್ರಿ’ ದಯಾಳ್ ನಿರ್ದೇಶಿಸುತ್ತಿರುವ ಹೊಸ ಸಿನಿಮಾ. ಮೋಹನ್ ಹಬ್ಬು ಅವರ ನಾಟಕ 'ಕರಾಳ ರಾತ್ರಿ’ಯನ್ನು ಆಧರಿಸಿ, ಅದೇ ಹೆಸರಿನಲ್ಲೇ ರೂಪುಗೊಳ್ಳುತ್ತಿರುವ ಚಿತ್ರದ ಪ್ರಮುಖ ಪಾತ್ರಗಳಿಗೆ ತಮ್ಮ ಕಿರುತೆರೆ ಸಂಗಡಿಗರನ್ನೇ ದಯಾಳ್ ಕರೆತಂದಿದ್ದಾರೆ. ಜಯರಾಂ ಕಾರ್ತಿಕ್ (ಜೆಕೆ) ಚಿತ್ರದ ನಾಯಕನಾದರೆ, ಅನುಪಮಾ ನಾಯಕಿಯಾಗಿ ನಟಿಸುತ್ತಿದ್ದಾರೆ. ಲೇವಾದೇವಿ ವ್ಯವಹಾರ ನಡೆಸುವ ದುಷ್ಟ ವ್ಯಕ್ತಿಯೊಬ್ಬನ ಪಾತ್ರಕ್ಕಾಗಿ ಸಂಖ್ಯಾಶಾಸ್ತ್ರಜ್ಞ ಜಯಶ್ರೀನಿವಾಸನ್ ಬಣ್ಣಹಚ್ಚಿದ್ದಾರೆ.

ಎಂಬತ್ತರ ದಶಕದ ಕಲರ್‌ಫುಲ್ ವ್ಯಕ್ತಿತ್ವದ ತರುಣನ ಪಾತ್ರದಲ್ಲಿ ಜೆಕೆ ಕಾಣಿಸಿಕೊಳ್ಳುತ್ತಿದ್ದರೆ, ಅನುಪಮಾ ಹದಿನಾರಾಣೆ ಹಳ್ಳಿ ಹುಡುಗಿಯ ಪೋಷಾಕು ಧರಿಸಿದ್ದಾರೆ. ರೋಚಕತೆಯ ಜೊತೆಗೆ ಭಾವುಕತೆಗೂ ಕಥೆಯಲ್ಲಿ ಸಾಕಷ್ಟು ಅವಕಾಶವಿದೆಯಂತೆ. ರಂಗಾಯಣ ರಘು ಹಾಗೂ ವೀಣಾ ಸುಂದರ್ ತಾರಾಗಣದಲ್ಲಿರುವ ಪ್ರಮುಖರು. ಚಿತ್ರಕಥೆ–ಸಂಭಾಷಣೆ ರೂಪಿಸುವಲ್ಲಿ ದಯಾಳ್ ಅವರಿಗೆ ನೆರವಾಗಿರುವ ನವೀನ್ ಕೃಷ್ಣ ಪ್ರಮುಖ ಪಾತ್ರವೊಂದರಲ್ಲೂ ನಟಿಸುತ್ತಿದ್ದಾರೆ.

## ನಾರಾಯಣ... ನಾರಾಯಣ...



ಪುರಾಣ ಕಥನಗಳ ಸ್ಥಿತಿಕರ್ತ ನಾರಾಯಣನದು ದಶಾವತಾರ. ಗಾಂಧಿನಗರದ ನಾರಾಯಣ ಕೂಡ ಅವತಾರಗಳನ್ನು ಎತ್ತುವುದರಲ್ಲಿ ಕಡಿಮೆಯೇನಲ್ಲ. ಆದರೆ, ಈ ನಾರಾಯಣನ ಎಲ್ಲ ಅವತಾರಗಳ ಉದ್ದೇಶದ ಹಿಂದಿರುವುದು ಮನರಂಜನೆ!

‘ಅವನೇ ಶ್ರೀಮನ್ನಾರಾಯಣ’ ರಕ್ಷಿತ್ ಶೆಟ್ಟಿ ನಟಿಸುತ್ತಿರುವ ಹೊಸ ಸಿನಿಮಾದ ಶೀರ್ಷಿಕೆ. ಕಳೆದ ವಾರ ಚಿತ್ರೀಕರಣ ಆರಂಭಿಸಿರುವ ನಾರಾಯಣನ ಪರಿವಾರ, ಸಿನಿಮಾ ಬಿಡುಗಡೆಯ ದಿನಾಂಕವನ್ನೂ ಪ್ರಕಟಿಸಿದೆ. ಬರುವ ಡಿ. 28ರಂದು ಈ ಚಿತ್ರ ಬಿಡುಗಡೆಯಾಗಲಿದೆಯಂತೆ. ‘ಕಿರಿಕ್ ಪಾರ್ಟಿ’ ಬಿಡುಗಡೆಯಾದುದು ಇದೇ ದಿನ. ದೊಡ್ಡ ಗೆಲುವು ಸಾಧಿಸಿದ ಕಿರಿಕ್ ಪಾರ್ಟಿ ನಂತರ ರಕ್ಷಿತ್ ನಟಿಸುತ್ತಿರುವ ಚಿತ್ರ ಇದಾಗಿರುವುದರಿಂದ, ‘ಶ್ರೀಮನ್ನಾರಾಯಣ’ನ ಬಗ್ಗೆ ಚಿತ್ರರಂಗದಲ್ಲಿ ಸಾಕಷ್ಟು ನಿರೀಕ್ಷೆಯಿದೆ.

ಎಂಬತ್ತರ ದಶಕದ ಕಥೆಯನ್ನು ಒಳಗೊಂಡಿರುವ ‘ಅವನೇ ಶ್ರೀಮನ್ನಾರಾಯಣ’ ಚಿತ್ರವನ್ನು ಸಚಿನ್ ನಿರ್ದೇಶಿಸುತ್ತಿದ್ದಾರೆ. ಕಂಠೀರವ ಸ್ಟುಡಿಯೋದಲ್ಲಿ ನಿರ್ಮಿಸಲಾಗಿರುವ ಬೃಹತ್ ಸೆಟ್‌ನಲ್ಲಿ ಚಿತ್ರದ ಬಹುತೇಕ ಶೂಟಿಂಗ್ ನಡೆಯಲಿದೆ. ನಾಯಕನಟ ರಕ್ಷಿತ್ ಇಮೇಜ್ ವಿಜೃಂಭಣೆಗೆ ಅಗತ್ಯವಾದ ಎಲ್ಲ ಐಟಂಗಳನ್ನು ನಿರ್ದೇಶಕರು ಸಿದ್ಧಪಡಿಸಿದ್ದಾರೆ. ರಕ್ಷಿತ್‌ಗಾಗಿ ಐದು ವಿಭಿನ್ನ ಗೆಟಪ್‌ಗಳನ್ನು ರೂಪಿಸಿದ್ದು, ಅವುಗಳಲ್ಲೊಂದು ಭ್ರಷ್ಟ ಪೊಲೀಸ್ ಅಧಿಕಾರಿಯ ಪಾತ್ರ. ಶಾನ್ವಿ ಶ್ರೀವಾಸ್ತವ ಚಿತ್ರದ ನಾಯಕಿ. ಕನ್ನಡ ಚಿತ್ರರಂಗದಲ್ಲಿ ನೆಲೆ ಕಂಡುಕೊಳ್ಳುವ ತವಕದಲ್ಲಿರುವ ಶಾನ್ವಿಗೆ ಈ ಚಿತ್ರವನ್ನು ತಮ್ಮ ವೃತ್ತಿಜೀವನದ ಮಹತ್ವದ ತಿರುವು ಎಂದು ಭಾವಿಸಿದ್ದಾರೆ.

ಅಚ್ಯುತ್ ಕುಮಾರ್ ಮತ್ತು ಬಾಲಾಜಿ ಮನೋಹರ್ ತಾರಾಗಣದಲ್ಲಿರುವ ಪ್ರಮುಖರು. ಚರಣ್ ರಾಜ್ ಸಂಗೀತ ಹಾಗೂ ಕರಂ ಚಾವ್ಲಾ ಛಾಯಾಗ್ರಹಣ ಚಿತ್ರಕ್ಕಿದೆ.

■ ರಘು